# ಕವಿ ಸಂವೇದನೆಯ ಬರವಣಿಗೆ

ಬರಗಾಲದಲ್ಲಿ ಬಂದ ಮಳೆಯಂತೆ, ಈ ಕಾದಂಬರಿ ನನ್ನನ್ನು ಹಿಗ್ಗಿಸಿದೆ. ಸಾಮಾಜಿಕ ಧೋರಣೆಗಳ ಜರಡಿಯಲ್ಲಿ ಸೋಸಿತೆಗೆದ ಅನುಭವಗಳ ನೇರವಾದ ಭಾಷಿಕನಿರೂಪಣೆಯಿಂದ ಬೇಸತ್ತ ಮನಸ್ಸಿಗೆ ವಸ್ತು, ಕಥನಕ್ರಮ, ವಿವರಗಳು, ಶೈಲಿ ಮುಂತಾದ ಹಲವು ಹಂತಗಳಲ್ಲಿ, ಸೃಜನಶೀಲವೂ ಕವಿಸಹಜವೂ ಆದ ಕಲ್ಪನಾಶಕ್ತಿಯನ್ನು ತೋರಿಸಿರುವ, ಇಪ್ಪತ್ತೆರಡರ ಹರೆಯದ ಕಪಿಲ ದೂರದ ಬೀದರ್‌ನಿಂದ ಬಂದು ನಾಳಿನ ಭರವಸೆಯಾಗಿದ್ದಾರೆ. ಜೀವನ, ಸಮಾಜ, ಅನುಭವ, ಭಾವನೆಗಳೆಲ್ಲವೂ ಭಾಷೆಯೆಂಬ ಅಗ್ನಿದಿವ್ಯದಲ್ಲಿ ಹಾದು ಬರದಿದ್ದರೆ ಹುಸಿಯಾಗುವುದೆಂಬ ದಿಟವನ್ನು ಈ ತರುಣ ತಿಳಿದಿದ್ದಾರೆ. ಅಂತೆಯೇ ಈ ಕೃತಿಯಲ್ಲಿ ತನಗೆ ಅಗತ್ಯವಾದ ಘಟನೆಗಳ ಸೃಷ್ಟಿ, ಮರುಜೋಡಣೆ, ಅವು ನಡೆದ ಕಾಲಗಳ ನಿರ್ವಹಣೆ, ವಾಸ್ತವ ಮತ್ತು ಅ–ವಾಸ್ತವಗಳ ಹೆಣಿಗೆ, ಹೋಲಿಕೆ ಮತ್ತು ರೂಪಕಗಳ ಮೂಲಕವೇ ದಿಟವಾಗುವ ವಿವರಗಳು, ತಾತ್ವಿಕ ಕುತೂಹಲ ಎಲ್ಲವೂ ಒಂದು ಹದದಲ್ಲಿ ಬೆರೆತು ಮನ ಸೆಳೆಯುತ್ತವೆ.




ಹಾಣಾದಿ
(ಕಾದಂಬರಿ)
ಲೇ: ಕಪಿಲ ಹುಮನಾಬಾದೆ
ಪ್ರ: ಕಾವ್ಯಮನೆ ಪ್ರಕಾಶನ,
ಕಲಬುರ್ಗಿ

ಇದು ಜನರಹಿತವಾಗಿರುವ ಹಳ್ಳಿಯೊಂದರ ಅವಶೇಷಗಳ ನಡುವೆ ನಿಂತು, ಅದರ ವಿನಾಶದ ಹೆಜ್ಜೆಗುರುತುಗಳನ್ನು ಹಲವರ ನೆನಪುಗಳ ಬೆಂಬಲದಿಂದ ಕಟ್ಟಿಕೊಡುವ ಬರಹ. ಮೇಲುಗೇರಿ ಮತ್ತು ಕೆಳಗೇರಿಗಳ ನಡುವೆ ನೆಲೆನಿಂತಿರುವ ಬಾದಾಮಿಮರ ಮತ್ತು ಅದರ ಜೊತೆ ಜೀವವಾದ ನಿರೂಪಕನ ಅಪ್ಪನ ದುರಂತಗಳು ಊರಿನ ವಿಧಿಯೊಡನೆ ತಳುಕು ಹಾಕಿಕೊಳ್ಳುತ್ತವೆ. ಈ ಕಥೆ ಹೇಳಲೆಂದೇ ಮರುಬಾಳು ಪಡೆದಂತಿರುವ ಗುಬ್ಬಿ ಆಯಿ, ಮನೆಯಾಳು ಕಂಟಿಯ ಮಗ ತೋತ್ಯಾನ ಹುಟ್ಟುವ ಮೊದಲೇ ಸತ್ತ ಆಟವಾಡುವ ಮಗಳು, ಹೊಲ–ನೆಲ–ಬಿಸಿಲು–ಬಯಲು–ಪ್ರಾಣಿ–ಪಕ್ಷಿ–ಕೀಟಗಳ ಲೋಕವು ಭಾಷೆಯಲ್ಲಿಯೇ ಹುಟ್ಟಿ ಮೈಪಡೆದು ಕಾದಂಬರಿಯ ಶಿಲ್ಪಕ್ಕೆ ಕಾಣಿಕೆ ನೀಡಿ ಅಲ್ಲಿಯೇ ಕರಗುತ್ತವೆ. ಇವೆಲ್ಲವೂ ಸೃಷ್ಟಿಸುವ ಭ್ರಾಮಕ ವಾತಾವರಣವೇ ಕಾದಂಬರಿಯ ಜೀವ.

ಕವಿಸಂವೇದನೆಯಿಂದ ಮೂಡಿರುವ ಈ ಬರವಣಿಗೆಯಲ್ಲಿ ಉಪಮೆ–ರೂಪಕಗಳು ಸ್ವಂತ ಅಸ್ತಿತ್ವವನ್ನು ಪಡೆಯುತ್ತವೆ. ಬೀದರ್ ಪ್ರದೇಶದ ಭಾಷಿಕ ರಚನೆ ಮತ್ತು ಶಬ್ದಕೋಶವನ್ನು ದಿಟ್ಟತನದಿಂದ ಬಳಸಿರುವ ಕಪಿಲ ನಮ್ಮ ಕಾಲದ ರೋಗಗಳಾದ ಅತಿ ಪ್ರಸಿದ್ಧಿ ಮತ್ತು ಆತ್ಮರತಿಯನ್ನು ಮೀರಿ, ಇನ್ನಷ್ಟು ಸಾವಧಾನವನ್ನು ಗಳಿಸಿ ಬೆಳೆಯಲೆಂದು ಪ್ರೀತಿಯಿಂದ ಹಾರೈಸುತ್ತೇನೆ.

**● ಎಚ್.ಎಸ್. ರಾಘವೇಂದ್ರ ರಾವ್**